ಉಪಾಧ್ಯಕ್ಷರು :- ಕರ್ನಾಟಕ ವಿಧಾನಸಭೇಯ ಕಾರ್ಯ ವಿಧಾನ ಹಾಗೂ ನಡವಳಿಕೆಯ 9ನೇ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಗೈರುಹಾಜರಿಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ನಾಮ ನಿರ್ದೇಶನ ಮಾಡಿದ್ದೇನೆ.

ಶ್ರೀಯುತರುಗಳಾದ :

1. ಬಿ.ಎಂ. ಇದಿನಬ್ಬ
2. ಶ್ರೀಮತಿ ಮೋಟಮ್ಮ
3. ಜಿ. ರಾಜುಗೌಡ
4. ಎಸ್.ಹೆಚ್. ಕೌಜಲಗಿ
5. ಜಿ.ಎಸ್. ಶಿವನಂಜಪ್ಪ
6. ಶ್ರೀಮತಿ ದಮಯಂತಿ ಬೋರೇಗೌಡ

ಶ್ರೀ ಗೋಪಾಲಮುಕುಂದ ಕಾನಡೆ :- ಮಾನ್ಯ ಅಧ್ಯಕ್ಷರೇ, ಮಂಗಳವಾರ ರಜಾ ದಿನವಾಗಿರುವುದರಿಂದ ಸೋಮವಾರವೂ ಒಂದು ದಿವಸ ಅಧಿವೇಶನಕ್ಕೆ ರಜ ಕೊಟ್ಟರೆ ಒಳ್ಳೆಯದು.

ಶ್ರೀ ಹಾರನಹಳ್ಳಿ ರಾಮಸ್ವಾಮಿ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೇ , ಬಹಳ ಜನ ಸದಸ್ಯರು 28, 29 ಮತ್ತು 31 ರಂದು ರಜ ಇರುವುದರಿಂದ, 30ನೇ ತಾರೀಖು ವಿಧಾನ ಸಭೆ ಸೇರುವುದು ಬೇಡ ಎಂದು ಅಪೇಕ್ಷೆ ಪಟ್ಟಿರುವುದರಿಂದ, ಸರ್ಕಾರದ ವತಿಯಿಂದ ಇದಕ್ಕೆ ವಿರೋಧ ಇಲ್ಲ ; ರಜ ಕೊಡಬಹುದು. 1ನೇ ತಾರೀಖು ಸಭೆ ಪುನಃ ಸೇರಬಹುದು.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) :- ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಸೋಮವಾರ ಸಭೆ ಸೇರಬೇಕೆಂದು ನಿರ್ಣಯವಾಗಿದೆ. ಆದರೆ ಬಿಸಿನೆಸ್ ಅಡ್ವೈಸರಿ ಕಮಿಟಿಗಿಂತ ಹೆಚ್ಚಿನ ಅಧಿಕಾರ ಶಾಸನ ಸಭೆಗೆ ಇದೆ. ಆದ್ದರಿಂದ ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಲು ತಮಗೇ ಬಿಡುತ್ತೇವೆ.

ಉಪಾಧ್ಯಾಕ್ಷರು :- ಈಗ ಸದನದ ಕಲಾಪಗಳನ್ನು ಮುಂದೂಡುತ್ತಿದ್ದೇನೆ. ಸದನ ಮತ್ತೆ ದಿನಾಂಕ 1.9.93ರಂದು ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 6ಘಂಟೆ 32 ನಿಮಿಷಗಳಿಗೆ ಮುಕ್ತಾಯವಾಗಿ ಪುನಃ ಒಂದನೇ ಸೆಪ್ಟೆಂಬರ್ ಮಾಹೆ 1993 ಬುಧವಾರ ಬೆಳಿಗ್ಗೆ 11-00ಘಂಟೆಗೆ ಸೇರಲು ನಿಶ್ಚಯಿಸಿತು)

ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅನುಬಂಧ I

ಕರ್ನಾಟಕ ವಿಧಾನಸಭೆ

(ಒಂಭತ್ತನೆಯ ವಿಧಾನಸಭೆ)

(ಹತ್ತನೆಯ ಅಧಿವೇಶನ)

ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ, 1993

(1993ರ ವಿಧಾನಸಭಾ ವಿಧೇಯಕ ಸಂಖ್ಯೆ 28)